ನಗರಾಭಿವೃದ್ಧಿ ಇಲಾಖೆಯಿಂದ ರಾಜ್ಯದಲ್ಲಿ ವಿವಿಧ ಕೆಲಸಗಳಿಗಾಗಿ ಖರ್ಚುಮಾಡಿರುವ ಹಣ ಎಷ್ಟು ಎನ್ನುವ ಪ್ರಶ್ನೆ ಕೇಳಿದ್ದಾರೆ. ನಾವು ಹಣ ಕೊಟ್ಟಿರುವ ವಿಷಯ ನೀವು ಕೇಳಲಿಲ್ಲ. ನಾವು ಬೇರೆ ಬೇರೆ ಇಲಾಖೆಗಳಿಂದ ಖರ್ಚುಮಾಡಿದ ಹಣ ನೀವು ಕೇಳಿದ್ದೀರಿ, ಅದನ್ನು ಸರಿಯಾಗಿ ಕೊಟ್ಟಿದ್ದೇವೆ. ಅದಕ್ಕೆ ನೀವು ಬೇರೆ ಪ್ರಶ್ನೆ ಹಾಕಿದರೆ ಅದರ ಮಾಹಿತಿ ಕೊಡುತ್ತೇವೆ. ಮತ್ತೆ ನೀವು ನಮ್ಮ ಬೆಂಗಳೂರಿನ ಜನಸಂಖ್ಯೆ ಜಾಸ್ತಿಯಾಗುತ್ತಿದೆ, ಅದನ್ನು ತಡೆಯುವುದಕ್ಕೆ ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದೀರಿ ಎಂದು ಕೇಳಿದಿರಿ. ಅದು ಪಾಲಿಸಿ ಮ್ಯಾಟರ್ ಆಗುತ್ತದೆ. ನಾವು ಬರೀ ಅಭಿವೃದ್ಧಿ ಇಲಾಖೆಯಿಂದ ಹೇಳುವುದಕ್ಕೆ ಆಗುವುದಿಲ್ಲ. ಇಡೀ ಕ್ಯಾಬಿನೇಟ್‌ನವರು ಅದನ್ನು ಪರಿಶೀಲನೆ ಮಾಡಿ ಇತ್ಯರ್ಥ ಮಾಡಬೇಕಾಗುತ್ತದೆ.

ವಿಷಯ :- ನೇಕಾರರಿಗೆ ಕಚ್ಚಾ ಸಾಮಗ್ರಿಗಳ ಕೊರತೆ

Q:1251

ಶ್ರೀ ಹೆಚ್. ವೈ. ಮೇಟಿ (ಗುಳೇದಗುಡ್ಡ) : ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ನೇಕಾರರ ಸಮಸ್ಯೆಗಳನ್ನು ಎದುರಿಸಲು ಸರ್ಕಾರಕ್ಕೆ ಮನವಿಗಳು ಏನಾದರೂ ಬಂದಿದೆಯೇ, ಹಾಗಿದ್ದಲ್ಲಿ ಆ ಸಮಸ್ಯೆಗಳು ಯಾವುವು?

ಆ) ಬಾದಾಮಿ ತಾಲ್ಲೂಕಿನ ಗುಳೇದಗುಡ್ಡ ಹಾಗೂ ಕಮತಗಿಯಲ್ಲಿ ನೇಕಾರರಿಗೆ ಕಚ್ಚಾಮಾಲು ಸಿಗದೇ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಕಚ್ಚಾಮಾಲು ಒದಗಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಈ) ಈ ಹಿಂದೆ ಇದ್ದ ಕಚ್ಚಾಮಾಲಿನ ಬೆಲೆಯನ್ನು ಈಗ ಶೇಕಡ 50ರಷ್ಟು ಹೆಚ್ಚಿಸಿರುವುದು ನಿಜವಲ್ಲವೇ?

ಉ) ಸದರಿ ನೇಕಾರರು ತಯಾರಿಸಿದ ಮಾಲಿಗೆ ಬೆಲೆಯನ್ನು ಕಡಿಮೆ ಮಾಡಿರುವುದು ಸಹ ನಿಜವಲ್ಲವೇ?

ಊ) ಈ ರೀತಿ ಕಚ್ಚಾಮಾಲಿನ ಬೆಲೆ ಹೆಚ್ಚಿಸಿ ತಯಾರಿಸಿದ ಮಾಲಿನ ಬೆಲೆ ಇಳಿಸುತ್ತಿರುವುದರಿಂದ ನೇಕಾರರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ, ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಹೆಚ್. ಕೆ. ಪಾಟೀಲ್ (ಜವಳಿ ರಾಜ್ಯ ಸಚಿವರು) :

ಅ) ಹೌದು. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಮತ್ತು ಸಹಕಾರ ಸಂಘಗಳ ನೇಕಾರರ ಪ್ರತಿನಿಧಿಗಳಿಂದ ಬೇಡಿಕೆಗಳ ಮನವಿಗಳು ಬಂದಿರುತ್ತವೆ. ಅವುಗಳಲ್ಲಿ ಪ್ರಮುಖವಾದವು ಕೆಳಕಂಡಂತೆ ಇರುತ್ತವೆ.

1) ನಿರಂತರ ಕಚ್ಚಾಮಾಲು ಸರಬರಾಜು ಮಾಡುವ ಬಗ್ಗೆ.
2) ನಿರಂತರ ಮಜೂರಿ ಪಾವತಿ ಮಾಡುವ ಬಗ್ಗೆ.
3) ಉತ್ತಮ ಗುಣಮಟ್ಟದ ನೂಲು ಸರಬರಾಜು ಮಾಡುವ ಬಗ್ಗೆ.

4) ಸಹಕಾರಿ ಸಂಘಗಳಲ್ಲಿ ಮಾರಾಟವಾಗದೇ ಉಳಿದಿರುವ ಬಟ್ಟೆಗಳ ಮಾರಾಟಕ್ಕೆ ಸಹಾಯ ನೀಡುವಿಕೆ ಹಾಗೂ ಇತ್ಯಾದಿ.

ಆ) ಬಾದಾಮಿ ತಾಲ್ಲೂಕಿನ ಗುಳೇದಗುಡ್ಡ ಮತ್ತು ಹುನಗುಂದ ತಾಲ್ಲೂಕಿನ ಕಮತಗಿಯಲ್ಲಿ, ಸಹಕಾರ ಸಂಘಗಳಲ್ಲಿ ಕೆಲಸ ಮಾಡುವ ನೇಕಾರರಿಗೆ ಕಚ್ಚಾಮಾಲು ಪೂರೈಕೆ, ಸಹಕಾರ ಸಂಘಗಳೇ ನಿರ್ವಹಿಸುತ್ತಿರುವುದರಿಂದ ಈ ಕ್ಷೇತ್ರದಲ್ಲಿ ತೊಂದರೆ ಇರುವುದಿಲ್ಲ. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವತಿಯಲ್ಲಿ, ಗುಳೇದಗುಡ್ಡ ಉಪ ಕೇಂದ್ರದಡಿಯಲ್ಲಿನ ನೇಕಾರರು ಜನತಾ ಬಟ್ಟೆಗಳನ್ನು ನೇಯುತ್ತಿದ್ದು ಅವರಿಗೆ ನೂಲು ಪೂರೈಕೆಯಲ್ಲಿ ಯಾವುದೇ ತರಹದ ತೊಂದರೆ ಇರುವುದಿಲ್ಲ.

ಹುನಗುಂದ ತಾಲೂಕಿನ ಕಮತಗಿಯಲ್ಲಿನ ಉಪಕೇಂದ್ರದಲ್ಲಿ ಜನವರಿ ತಿಂಗಳಲ್ಲಿ ಮಾತ್ರ ಆರ್ಟ್‌ಸಿಲ್ಕ್‌ನ ಮಾಲು ಪೂರೈಕೆಯಲ್ಲಿ ಕೆಲವು ದಿನಗಳ ಮಟ್ಟಿಗೆ ಬಾಂಬೆ ಮಿಲ್‌ಗಳಿಂದ ನೂಲು ಸರಬರಾಜಾಗದ ಕಾರಣ ನೇಕಾರರಿಗೆ ನೂಲು ಪೂರೈಕೆಯಲ್ಲಿ ತೊಂದರೆ ಆಗಿದ್ದು ಈಗ ಪರಿಸ್ಥಿತಿ ಸುಧಾರಿಸಿದ್ದು, ತೊಂದರೆ ಇರುವುದಿಲ್ಲ.

ಇ) ಕರ್ನಾಟಕ ಕೈಮಗ್ಗದ ಅಭಿವೃದ್ಧಿ ನಿಗಮದ ಅಡಿಯಲ್ಲಿ ಇರುವ ಎಲ್ಲಾ ನೇಕಾರರಿಗೂ ಸಹ ನಿರಂತರವಾಗಿ ನೂಲು ಸರಬರಾಜು ಆಗುತ್ತಿರುತ್ತದೆ. ಇದೇ ರೀತಿ ಪ್ರಾಥಮಿಕ ಸಹಕಾರ ಸಂಘಗಳ ಅಧೀನದಲ್ಲಿ ಕೆಲಸ ಮಾಡುತ್ತಿರುವ ನೇಕಾರರುಗಳಿಗೆ ಈ ಪ್ರಾಥಮಿಕ ಸಹಕಾರ ಸಂಘಗಳೇ ಸದ್ಯದಲ್ಲಿ ನೂಲು ಖರೀದಿಸಿ ಸರಬರಾಜು ಮಾಡುತ್ತಿರುತ್ತವೆ. ಈಗ ಹೊಸದಾಗಿ ರಚಿತವಾಗಿರುವ ಕರ್ನಾಟಕ ಸಹಕಾರ ಕೈಮಗ್ಗ ನೇಕಾರರ ಮಹಾಮಂಡಲಿ ಸಹ ಆರ್ಟ್‌ಸಿಲ್ಕ್ ಹಾಗೂ ಇತ್ಯಾದಿ ಕಚ್ಚಾ ಮಾಲುಗಳನ್ನು ತಮ್ಮ ಸದಸ್ಯ ಸಹಕಾರ ಸಂಘಗಳಿಗೆ ಸರಬರಾಜು ಮಾಡಲು ಉದ್ದೇಶ ಹೊಂದಿರುತ್ತದೆ.

ಈ) ಹೌದು. ಕಚ್ಚಾಮಾಲಿನ ಬೆಲೆ ಹಿಂದಿನ ಎರಡು ವರ್ಷಕ್ಕೆ ಹೋಲಿಸಿದಲ್ಲಿ ಹತ್ತಿ ನೂಲಿನ ಬೆಲೆ ಶೇಕಡ 25 ರಿಂದ 35 ಭಾಗದಷ್ಟು ಮತ್ತು ಆರ್ಟ್‌ಸಿಲ್ಕ್‌ನ ನೂಲಿನ ಬೆಲೆ ಶೇಕಡ 20ರಿಂದ 55 ಭಾಗದಷ್ಟು ಹೆಚ್ಚಿಸಿರುತ್ತದೆ.

ಉ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಡಿಯಲ್ಲಿ ಕೆಲಸ ಮಾಡುವ ನೇಕಾರರಿಗೆ, ಕಚ್ಚಾಮಾಲು ಪೂರೈಸಿ ,ಅವರಿಗೆ ಸೂಕ್ತ ಮಜೂರಿ ನೀಡಿ ಬಟ್ಟೆಗಳನ್ನು ನಿಗಮವೇ ಹಿಂತೆಗೆದುಕೊಳ್ಳುತ್ತಿರುವುದರಿಂದ,ನಿಗಮದ ನೇಕಾರರಿಗೆ ಈ ಪ್ರಶ್ನೆ ಅನ್ವಯಿಸುವುದಿಲ್ಲ. ಪ್ರಾಥಮಿಕ ಸಹಕಾರ ಸಂಘಗಳಲ್ಲಿ ಉತ್ಪಾದಿಸಿದ ಬಟ್ಟೆಗಳ ಮೇಲಿನ ಬೆಲೆಯನ್ನು ಸಹಕಾರಿ ಸಂಘದವರೇ ನಿರ್ಧರಿಸುತ್ತಿರುವುದರಿಂದ ಈ ಕ್ಷೇತ್ರದಲ್ಲಿ ಉತ್ಪಾದನೆಯಾಗಿರುವ ಬಟ್ಟೆಗಳ ಬೆಲೆ ಕಡಿಮೆ ಮಾಡಿರುವ ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಇಲ್ಲಾ.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ತನ್ನ ನೇಕಾರರಿಗೆ ನೂಲು ಸರಬರಾಜು ಮಾಡಿ, ಅವರಿಗೆ ಸೂಕ್ತ ಮಂಜೂರಿ ನೀಡಿ ನೂರಕ್ಕೆ ನೂರರಷ್ಟು ಬಟ್ಟೆಗಳನ್ನು ಅವರಿಂದ ಹಿಂತೆಗೆದುಕೊಳ್ಳುತ್ತಿರುತ್ತದೆ. ಇದರಿಂದ ನಿಗಮದ ನೇಕಾರರಿಗೆ ಕಚ್ಚಾಮಾಲಿನ ಬೆಲೆ ಹೆಚ್ಚಳದ ಪ್ರಭಾವ ಅನ್ವಯಿಸುವುದಿಲ್ಲ. ಪ್ರಾಥಮಿಕ ನೇಕಾರ ಸಹಕಾರ ಸಂಘಗಳು ಸಹ ತಮಗೆ ಬೇಕಾದ ಕಚ್ಚಾಮಾಲನ್ನು ತಾವೇ ಖರೀದಿಸಿ ತಮ್ಮ ನೇಕಾರರು ಉತ್ಪಾದಿಸಿದ ಬಟ್ಟೆಗಳನ್ನು ತಾವೇ ಮಾರುಕಟ್ಟೆ ಮಾಡುತ್ತಿರುತ್ತವೆ. ಆದರೆ ಈ ಸಹಕಾರ ಸಂಘಗಳು ತಯಾರಿಸಿರುವ ಇಲ್‌ಕಲ್ ಮಾದರಿಯ ಸೀರೆಗಳಿಗೆಲ್ಲಾ ಸುಮಾರು 60 ಭಾಗದಷ್ಟು ಆರ್ಟ್‌ಸಿಲ್ಕ್ ನೂಲನ್ನು ಉಪಯೋಗಿಸಿದ್ದು, ಈಗ ಈ ನೂಲಿನ ಬೆಲೆ ಹೆಚ್ಚಳದಿಂದ. ಬಟ್ಟೆಗಳ ಬೆಲೆ ಸಹ ಹೆಚ್ಚಿಸಬೇಕಾಗಿದ್ದು ಈ ರೀತಿ ಹೆಚ್ಚಿಸಿದ ಬಟ್ಟೆಗಳಿಗೆ

ಮಾರುಕಟ್ಟೆಯಲ್ಲಿ ಬೇಡಿಕೆ ಕಡಿಮೆ ಇರುವುದರಿಂದ ಈ ಸೀರೆಗಳು ಮಾರಾಟವಾಗದೇ

ಉಳಿದಿರುತ್ತದೆ. ಇದಕ್ಕೆ ಮಾರಾಟ ಕಲ್ಪಿಸಲು ಸರ್ಕಾರ ಈಗಾಗಲೇ ಯೋಜನೆ ರೂಪಿಸಲು ಕ್ರಮ ತೆಗೆದುಕೊಂಡಿರುತ್ತದೆ.

ಶ್ರೀ ಹೆಚ್. ವೈ. ಮೇಟಿ : ಮಾನ್ಯ ಅಧ್ಯಕ್ಷರೇ, ಈ ನೇಕಾರರ ಸಮಸ್ಯೆ ಬಗ್ಗೆ ಕೇಳಿದಾಗ ಮಾನ್ಯ ಮಂತ್ರಿಗಳು ಈ ಸಹಕಾರ ಸಂಘಗಳ ಮುಖಾಂತರ ನಾವು ಮಾಲು ಕೊಡುತ್ತೇವೆ, ಅವರೇ ಮಾಲು ಖರೀದಿ ಮಾಡುತ್ತಾರೆ. ಅಂದರೆ ತಯಾರಾದ ಬಟ್ಟೆಯನ್ನು ಖರೀದಿ ಮಾಡುತ್ತಾರೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ನಮ್ಮ ಮತಕ್ಷೇತ್ರದಲ್ಲಿ ಸುಳಿಭಾವಿ ಶಾಕಂಬರಿ ಸೊಸೈಟಿ ಬಿಟ್ಟರೆ ಯಾವ ಸಹಕಾರ ಸಂಘಗಳು ಸುಸ್ಥಿತಿಯಲ್ಲಿ ಇಲ್ಲ. ಕಾರಣ ಅವೆಲ್ಲಾ ಲಾಸ್‌ನಲ್ಲಿ ಇವೆ. ಹೀಗಾಗಿ ನೇಕಾರರಿಗೆ ಸರಿಯಾಗಿ ಈ ಆರ್ಟ್‌ಸಿಲ್ಕ್ ಮತ್ತು ಚಮಕಾ ಕೊಡುವುದು ಆಗಿಲ್ಲದಿರುವುದರಿಂದ ಅವರ ಸಮಸ್ಯೆ ಬಹಳ ಗಂಭೀವಾಗಿದೆ. ಈ ವಿಚಾರವಾಗಿ ಸರ್ಕಾರ ಶಾಶ್ವತವಾದ ಪರಿಹಾರ ಮಾಡಲಿಕ್ಕೆ ಏನು ಮಾಡುತ್ತದೆ ಎನ್ನುವುದನ್ನು ಹೇಳಬೇಕು. ಆಮೇಲೆ ಕೆ. ಎಸ್. ಡಿ. ಸಿ. ಮಗ್ಗಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಡಬೇಕು. ಈಗ ಕೆ. ಎಸ್. ಡಿ. ಸಿ. ಮತ್ತು ಸೊಸೈಟಿಯಿಂದ ನಡೆಯತಕ್ಕಂತಹ ಮಗ್ಗಗಳಲ್ಲಿ ಬಹಳ ಕಡಿಮೆ ಜನರು ಕೆಲಸ ಮಾಡುತ್ತಾರೆ. ಆದರೆ ಪ್ರೈವೇಟಾಗಿ ಶ್ರೀಮಂತರ ಕೈಯಲ್ಲಿ ನಡೆಯುತ್ತಿರುವ ಹೆಚ್ಚು ಮಗ್ಗಗಳಲ್ಲಿ ಕೆಲಸ ಮಾಡುವಂತಹ ನೇಕಾರರ ಸಮಸ್ಯೆ ಬಗ್ಗೆ ನಾನು ಕೇಳಿದ್ದೆ. ಅವರ ಬಗ್ಗೆ ಉತ್ತರವೇ ಇಲ್ಲ. ಮತ್ತು ಕಚ್ಚಾಮಾಲಿನ ಆರ್ಟ್‌ಸಿಲ್ಕ್‌ನ ಬೆಲೆ 20 ರಿಂದ 55 ಭಾಗದಷ್ಟು ಹೆಚ್ಚಾಗಿದೆ ಎಂದು ಹೇಳಿದ್ದಾರೆ. ಆದರೆ 55 ಭಾಗದ ಬೆಲೆ ಹೆಚ್ಚಾದರೆ ಪ್ರೈವೇಟಾಗಿ ಕೆಲಸ ಮಾಡುವಂತಹ ನೇಕಾರರಿಗೆ ಒಂದು ಶಾಶ್ವತವಾದಂತಹ ಪರಿಹಾರ ಕಂಡುಹಿಡಿಯುವ ಯೋಜನೆ ಮಾಡಬೇಕಾಗಿದೆ ಎಂದು ನಾನು ತಮ್ಮ ಮುಖಾಂತರ ಅವರನ್ನು ಕೇಳುತ್ತೇನೆ.

ಶ್ರೀ ಸಿ. ಆರ್. ಸಗೀರ್ ಅಹಮದ್ (ಜವಳಿ ರಾಜ್ಯ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರುವಂತಹ ಉಪಪ್ರಶ್ನೆಗಳಿಗೆ ಉತ್ತರ ಹೇಳುವುದಾದರೆ, ಈ ಒಂದು ಭಾಗದಲ್ಲಿ ಎರಡು ಸಹಕಾರ ಸಂಘಗಳು ಇವೆ. ಡಿಸೆಂಬರ್ ಮಾಹೆಯವರೆಗೆ ನೇಕಾರರಿಗೆ ಯಾವುದೇ ತೊಂದರೆಗಳು ಬಂದಿರುವುದಿಲ್ಲ. ಜನವರಿ ಮಾಹೆಯಲ್ಲಿ ನಾವು ಈ ನೇಕಾರರಿಗೆ ಒದಗಿಸಿಕೊಡಬೇಕಾದಂತಹ ನೂಲನ್ನು ಒದಗಿಸಿಕೊಡುವುದರಲ್ಲಿ ವಿಳಂಬವಾಗಿತ್ತು. ಈ ನೂಲನ್ನು ನಾವು ಮಹಾರಾಷ್ಟ್ರದಿಂದ ತಂದು ಒದಗಿಸಿಕೊಡಬೇಕಾಗಿತ್ತು, ಈ ಸಂದರ್ಭದಲ್ಲಿ ಸ್ವಲ್ಪ ವಿಳಂಬವಾಯಿತು. ಜನವರಿ ಮಾಹೆಯಲ್ಲಿ ನೇಕಾರರಿಗೆ ಕೆಲವು ತೊಂದರೆಗಳು ಆಗಿವೆ ಎಂದು ನಾವು ಹೇಳಿಕೆಯನ್ನು ನೀಡಿದ್ದೇವೆ. ಆದರೆ ಈ ಕಚ್ಚಾ ನೂಲನ್ನು ಅವರಿಗೆ ಒದಗಿಸಿಕೊಡುವುದರಲ್ಲಿ ಯಾವುದೇ ತೊಂದರೆ ತಾಪತ್ರಯಗಳು ಈ ತಿಂಗಳಲ್ಲಿ ಇಲ್ಲ. ಆದುದರಿಂದ ನಾವು ಬೇರೆ ಕಡೆಯಿಂದ ನೇಕಾರರಿಗೆ ನೂಲನ್ನು ಒದಗಿಸಿಕೊಟ್ಟಿದ್ದೇವೆ. ಇನ್ನು ಮುಂದೆ ಆ ರೀತಿಯ ತೊಂದರೆ ಆಗದಂತೆ ಸರ್ಕಾರ ನೋಡಿಕೊಳ್ಳುತ್ತದೆ ಎನ್ನುವಂತಹ ಭರವಸೆಯನ್ನು ನಾನು ನೀಡುತ್ತಿದ್ದೇನೆ.

ಶ್ರೀ ಹೆಚ್. ವೈ. ಮೇಟಿ : ಕೆ. ಎಸ್. ಡಿ. ಸಿ. ಮತಿಯಿಂದ ಕೈಮಗ್ಗಗಳನ್ನು ಜಾಸ್ತಿ ಕೊಡುತ್ತೀರಾ?

ಶ್ರೀ ಸಿ.ಆರ್.ಸಗೀರ್ ಅಹಮದ್ : ಸರ್ಕಾರದವರು ಇದಕ್ಕೆ ಸಾಕಾದಷ್ಟು ಪ್ರಮಾಣದಲ್ಲಿ ಪ್ರೋತ್ಸಾಹ ಕೊಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಇದರ ಉಪಯೋಗ ಆ ಭಾಗದ ಜನರು ಪಡೆದುಕೊಳ್ಳುತ್ತಾರೆಂದು ಅಭಿಪ್ರಾಯವಿದ್ದರೆ ನಾವು ಅದಕ್ಕೆ ಸಂಪೂರ್ಣವಾಗಿ ಬೆಂಬಲ ಕೊಡುತ್ತಿದ್ದೇವೆ. ಹಾಗೆಯೇ ಪ್ರೋತ್ಸಾಹ ನೀಡುತ್ತೇವೆ ಎನ್ನುವಂತಹ ಉತ್ತರವನ್ನು ನಾನು ಕೊಡುತ್ತಿದ್ದೇನೆ.

ವಿಷಯ :- ಮೈಸೂರು ಲ್ಯಾಂಪ್ ಘಟಕದಿಂದ ಕಚ್ಚಾ ಸಾಮಗ್ರಿಗಳ ಉತ್ಪಾದನೆಗೆ ಅನುಮತಿ.

Q:1549

ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ಲ್ಯಾಂಪ್ಸ್ ಘಟಕದಿಂದ ಎಷ್ಟು ಪೂರಕಗಳಿಗೆ (ಅನ್ಸಿಲರಿ ಯುನಿಟ್) ಕಚ್ಚಾ ಸಾಮಗ್ರಿಗಳನ್ನು ತಯಾರಿಸಲು ಅನುಮತಿ ನೀಡಲಾಗಿದೆ.

ಆ) ಯಾವ ಆಧಾರದ ಮೇಲೆ ನೀಡಲಾಗಿದೆ. ಯಾರು ಯಾರಿಗೆ ನೀಡಲಾಗಿದೆ (ಜಿಲ್ಲಾವಾರು ವಿವರ ನೀಡುವುದು)?

ಶ್ರೀಮತಿ ನಾಗಮ್ಮ ಕೇಶವಮೂರ್ತಿ(ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) 34

ಆ) ಉದ್ದಿಮೆದಾರರ ಸಾಮರ್ಥ್ಯ ಆರ್ಥಿಕ ಸ್ಥಾವಲಂಬನೆ ಮತ್ತು ತಾಂತ್ರಿಕ ಹಿನ್ನೆಲೆ ಇವುಗಳ ಆಧಾರದ ಮೇಲೆ ಆಯ್ಕೆ ಮಾಡಲಾಗಿದೆ. ಜಿಲ್ಲಾವಾರು ವಿವರಗಳನ್ನು ಒಳಗೊಂಡ ಪಟ್ಟಿಯನ್ನು ಲಗತ್ತಿಸಿದೆ.